**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 456/2025 **PW**-1

**ದಿಃ15.05.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರ ಪರ ವಕೀಲರಾದ ಶ್ರೀಮತಿ ಎಸ ಆರ ಜಿ ರವರಿಂದ.**

ನ್ಯಾಯಾಲಯಕ್ಕೆ ನಾನು ಅರ್ಜಿ ಸಲ್ಲಿಸಿದ್ದು ಅದನ್ನು ಯಾವುದಕ್ಕೆ ಸಲ್ಲಿಸಿದ್ದೇನೆಂದು ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ಅಪಘಾತದ ದಿಃ15-07-2024 ಆಗಿರುತ್ತದೆ. ಸದರಿ ಅಪಘಾತದಿಂದ ನನಗೆ ಯಾವುದೇ ತೊಂದರೆ ಆಗಿಲ್ಲವೆಂದರೆ ಸರಿ. ಗಾಡಿ ಅಪಘಾತವಾದ ತಕ್ಷಣ ನ್ಯಾಯಾಲಯಕ್ಕೆ 10 ತಿಂಗಳ ನಂತರ ಅರ್ಜಿ ಸಲ್ಲಿಸಿದ್ದು ಆ ವಿಳಂಬಕ್ಕೆ ನಾನು ಸರಿಯಾದ ಕಾರಣ ಕೊಡದೆ ಅರ್ಜಿ ಹಾಕಿರುತ್ತೇನೆಂದರೆ ಸಾಕ್ಷಿ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ತಡವಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಏಲ್ಲಿಯೂ ಅನಾರೋಗ್ಯವಾಗಿದ್ದ ಕಾರಣ ತಡವಾಗಿ ಅರ್ಜಿ ಸಲ್ಲಿಸಿದ್ದೇನೆಂದು ಬರೆಸಿಲ್ಲವೆಂದರೆ ಸಾಕ್ಷಿ ಬರೆಸಿಲ್ಲ ಎನ್ನುತ್ತಾರೆ. ನಾನು ಪರಿಹಾರ ಕೇಳಲು ನನ್ನ Brother in law ರವರ ಆರೋಗ್ಯ ಸರಿ ಇರಲಿಲ್ಲ ಎಂದು ಹೇಳುವ ಕಾರಣ ಕೂಡಾ ಸರಿಯಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ನನಗೂ ಕೂಡಾ ಆರೋಗ್ಯ ಸರಿ ಇರಲಿಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲವೆಂದರೆ ಸಾಕ್ಷಿ ಸಮ್ಮನೆ ನಿಲ್ಲುತ್ತಾರೆ. ಬಹಳ ಮಳೆ ಇದ್ದುದರಿಂದ ನಾನು ನ್ಯಾಯಾಲಯಕ್ಕೆ ಓಡಾಡಲು ಆಗಲಿಲ್ಲ ಎಂದು ಹೇಳುವುದು ಕೂಡಾ ಸರಿ ಅಲ್ಲವೆಂದರೆ ಮಳೆ ಇತ್ತು ಎನ್ನುತ್ತಾರೆ. 1 ನೇ ಅರ್ಜಿದಾರರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳದೆ ಇರುವ ಕಾರಣ ನಾನು ಅವರ ಪರವಾಗಿ ಯಾವುದೇ ರೀತಿಯ ಪರಿಹಾರ ಕೇಳಲು ಬರುವುದಿಲ್ಲ ಆ ಕಾರಣಕ್ಕೆ ನನ್ನ ಪರವಾಗಿ ಸದರಿ ಅರ್ಜಿ ಪುರಸ್ಕರಿಸಬೇಕು ಎಂದರೆ ಸಾಕ್ಷಿ ಅವರಿಗೆ ಅಡ್ಡಾಡಲು ಆಗುವುದಿಲ್ಲ ಎನ್ನುತ್ತಾರೆ. ಸದರಿ 1 ನೇ ಅರ್ಜಿದಾರರು ನ್ಯಾಯಾಲಯಕ್ಕೆ ಬಂದು ಸಾಕ್ಷಿ

ಹೇಳಬೇಕಾಗುತ್ತದೆ ಅವರ ಪರವಾಗಿ ನಾನು ಸಾಕ್ಷಿ ಹೇಳಲು ಬರುವುದಿಲ್ಲವೆಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಸದರಿ ಅರ್ಜಿಯನ್ನು ನಾನು ಯಾವುದೇ ಸಕಾರಣ ಇಲ್ಲದೆ 10 ತಿಂಗಳ ವಿಳಂಬವಾಗಿ ಸಲ್ಲಿಸಿರುವ ಕಾರಣ ಸದರಿ ಅರ್ಜಿಯನ್ನು ಪುರಸ್ಕರಿಸಲು ಆಗುವುದಿಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ